ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8 ]
Total No. of Printed Pages : 8 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]
Total No. of Questions : 57 ]

**ಸಂಕೇತ ಸಂಖ್ಯೆ : 96-K**
**Code No. : 96-K**

# D

**CCE PF**
**CCE PR**
**Revised & Unrevised**

Question Paper Serial No. **10**

ಇಲ್ಲಿಂದ ಕತ್ತರಿಸಿ

# ವಿಷಯ : ಅರ್ಥಶಾಸ್ತ್ರ

# Subject : ECONOMICS

**(ಕನ್ನಡ ಭಾಷಾಂತರ / Kannada Version)**

**(ಖಾಸಗಿ ಅಭ್ಯರ್ಥಿ & ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Fresh & Private Repeater)**

ದಿನಾಂಕ : 04. 04. 2020 ] [ Date : 04. 04. 2020

ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ] [ Time : 9-30 A.M. to 12-45 P.M.

ಗರಿಷ್ಠ ಅಂಕಗಳು : 100 ] [ Max. Marks : 100

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 57 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**Tear here**

I. **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :** $10 \times 1 = 10$

1. ಇವುಗಳಲ್ಲಿ ಕಪ್ಪು ವಜ್ರ

   (A) ಇಜ್ಜಲು

   (B) ಕಲ್ಲಿದ್ದಲು

   (C) ತಾಮ್ರ

   (D) ಗ್ರಾಫೈಟ್

2. 2011 ರ ಜನಗಣತಿಯ ಪ್ರಕಾರ ಭಾರತದಲ್ಲಿ ಅತಿ ಹೆಚ್ಚು ಜನಸಾಂದ್ರತೆ ಹೊಂದಿರುವ ರಾಜ್ಯ

   (A) ಬಿಹಾರ

   (B) ಅರುಣಾಚಲ ಪ್ರದೇಶ

   (C) ಕರ್ನಾಟಕ

   (D) ಪಂಜಾಬ್

3. ರೈತವಾರಿ ಪದ್ಧತಿಯನ್ನು ಜಾರಿಗೆ ತಂದವರು

   (A) ಕಾರ್ನ್‌ವಾಲಿಸ್

   (B) ವಿಲಿಯಮ್ ಬೆಂಟಿಂಕ್

   (C) ಕ್ಯಾನಿಂಗ್

   (D) ಥಾಮಸ್ ಮುನ್ರೋ

4. ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಸ್ಥಾಪಿಸಿರುವುದು ಇವರಿಗೆ ಹಣಕಾಸಿನ ನೆರವನ್ನು ಒದಗಿಸಲು

   (A) ಜೀತ ಕಾರ್ಮಿಕರಿಗೆ

   (B) ಕೈಗಾರಿಕಾ ಕಾರ್ಮಿಕರಿಗೆ

   (C) ಸಣ್ಣ ರೈತರಿಗೆ

   (D) ಸಹಕಾರಿ ಬ್ಯಾಂಕುಗಳಿಗೆ

5. ಸಾರ್ವಜನಿಕ ಸ್ವಾಮ್ಯದ ಸರ್ಕಾರಿ ಸಮಬಂಡವಾಳವನ್ನು ಖಾಸಗಿ ವಲಯದವರಿಗೆ ಮಾರಾಟ ಮಾಡುವುದು

(A) ಹೂಡಿಕೆ ಹಿಂತೆಗೆತ

(B) ಹೂಡಿಕೆ

(C) ಮಾರಾಟ

(D) ಕೊಳ್ಳುವಿಕೆ

6. ಭಾರತ ಸರ್ಕಾರವು ಜೀತಪದ್ಧತಿಯ ನಿರ್ಮೂಲನಾ ಕಾಯಿದೆಯನ್ನು ಜಾರಿಗೆ ತಂದ ವರ್ಷ

(A) 1986

(B) 1976

(C) 1975

(D) 1985

7. ಭಾರತ ಸರ್ಕಾರವು 1990 ರಲ್ಲಿ ಮುಕ್ತ ವಾಯುನೀತಿಯನ್ನು ಜಾರಿಗೊಳಿಸಿದ್ದು

(A) ವಾಯುಸಾರಿಗೆಯನ್ನು ರಾಷ್ಟ್ರೀಕರಣಗೊಳಿಸಲು

(B) ಖಾಸಗಿ ವಿಮಾನ ಸಂಸ್ಥೆಗಳನ್ನು ಸೇರಿಸಿಕೊಳ್ಳಲು

(C) ಅತ್ಯಂತ ತ್ವರಿತಗತಿಯ ಸಾರಿಗೆಯನ್ನಾಗಿಸಲು

(D) ವಾಯು ಸಾರಿಗೆಯನ್ನು ಅಗ್ಗವಾಗಿಸಲು

8. ಅಲ್ಯುಮಿನಿಯಂ ತಯಾರಿಕೆಯಲ್ಲಿ ಬಳಸುವ ಕಚ್ಚಾವಸ್ತು

(A) ಮ್ಯಾಂಗನೀಸ್

(B) ಅಭ್ರಕ

(C) ಬಾಕ್ಸೈಟ್

(D) ಸತು

9. ಹಸಿರು ಕ್ರಾಂತಿಯಲ್ಲಿ ಸೀಮಿತವಾಗಿದ್ದ ಪ್ರಮುಖ ಬೆಳೆಗಳು

(A) ಗೋಧಿ ಮತ್ತು ಹತ್ತಿಗೆ ಮಾತ್ರ

(B) ಹತ್ತಿ ಮತ್ತು ಕಬ್ಬಿಗೆ ಮಾತ್ರ

(C) ಭತ್ತ ಮತ್ತು ಕಬ್ಬಿಗೆ ಮಾತ್ರ

(D) ಭತ್ತ ಮತ್ತು ಗೋಧಿಗೆ ಮಾತ್ರ

10. ಭಾರತದಲ್ಲಿನ ಮೊಟ್ಟ ಮೊದಲ ರೈಲ್ವೆ ಸಂಪರ್ಕ

(A) ಬಾಂಬೆ ಮತ್ತು ಥಾಣೆ

(B) ಮದ್ರಾಸ್ ಮತ್ತು ಅರಕೋಣಮ್

(C) ಕಲ್ಕತ್ತಾ ಮತ್ತು ರಾಣಿಗಂಜ್

(D) ಬೆಂಗಳೂರು ಮತ್ತು ಮದ್ರಾಸ್

II. 11. ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :**

$5 \times 1 = 5$

| ***A* ಪಟ್ಟಿ** | ***B* ಪಟ್ಟಿ** |
|---|---|
| (A) ತಾರಾಪುರ | (i) ಕರ್ನಾಟಕ |
| (B) ಕುಡಂಕುಲಮ್ | (ii) ಗುಜರಾತ್ |
| (C) ನರೋರ | (iii) ಕೇರಳ |
| (D) ಕಕ್ರಪಾರ | (iv) ಉತ್ತರ ಪ್ರದೇಶ |
| (E) ಕೈಗಾ | (v) ತಮಿಳುನಾಡು |
| | (vi) ಮಹಾರಾಷ್ಟ್ರ |
| | (vii) ಆಂಧ್ರ ಪ್ರದೇಶ |

III. **ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** 15 × 1 = 15

12. ಅನಭಿವೃದ್ಧಿ ರಾಷ್ಟ್ರಗಳಲ್ಲಿ ಅಭಿವೃದ್ಧಿಯತ್ತ ಮುನ್ನಡೆಯಲು ರಾಜಕೀಯ ಇಚ್ಛಾ ಶಕ್ತಿಯ ಕೊರತೆ ಎದ್ದು ಕಾಣುತ್ತದೆ. ಹೇಗೆ ?

13. 1976 ರ ರಾಷ್ಟ್ರೀಯ ಜನಸಂಖ್ಯಾ ನೀತಿಯ ಪ್ರಮುಖ ಉದ್ದೇಶವೇನು ?

14. ಮಾನವಶಕ್ತಿ ಯೋಜನೆ ಎಂದರೇನು ?

15. ಭಾರತದಲ್ಲಿ ಭೂಹಿಡುವಳಿಗಳ ಮೇಲಿನ ಪರಮಾವಧಿ ಮಿತಿ ಶಾಸನವನ್ನು ಏಕೆ ರೂಪಿಸಲಾಯಿತು ?

16. ಭಾರತ ಸರ್ಕಾರವು ವಿವಿಧ ಹಂತಗಳಲ್ಲಿ ಸಂಘಟಿತ ಬ್ಯಾಂಕಿಂಗ್ ವ್ಯವಸ್ಥೆಯನ್ನು ಬಲಿಷ್ಠಗೊಳಿಸುವ ಪ್ರಯತ್ನ ಮಾಡಿದೆ. ಏಕೆ ?

17. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ರಾಷ್ಟ್ರೀಯ ಬ್ಯಾಂಕ್ (ನಬಾರ್ಡ್)ನ ಪ್ರಮುಖ ಉದ್ದೇಶವೇನು ?

18. ಜೀತ ಪದ್ಧತಿಯನ್ನು ಅನುಸರಿಸಲು ಪ್ರಮುಖ ಕಾರಣವೇನು ?

19. ಭಾರತದ ಎಲ್ಲಾ ರಾಜ್ಯಗಳು ಕನಿಷ್ಠ ವೇತನ ಕಾಯಿದೆಯನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೆ ತಂದಿಲ್ಲ. ಏಕೆ ?

20. ಬಡತನ ಎಂದರೇನು ?

21. ಸಾರಿಗೆ ಎಂದರೇನು ?

22. ಬಂದರು ಅಭಿವೃದ್ಧಿ ಇಲಾಖೆಯನ್ನು ಏಕೆ ಸ್ಥಾಪಿಸಲಾಗಿದೆ ?

23. ಭಾರತೀಯ ರಿಸರ್ವ್ ಬ್ಯಾಂಕಿನ ಕೇಂದ್ರ ಕಛೇರಿ ಎಲ್ಲಿದೆ ?

24. ವ್ಯಾಪಾರ ಎಂದರೇನು ?

25. ವಿದೇಶಿ ವಿನಿಮಯ ಎಂದರೇನು ?

26. ಅನಭಿವೃದ್ಧಿ ರಾಷ್ಟ್ರಗಳು ಮಾನವ ಅಭಿವೃದ್ಧಿ ಸೂಚ್ಯಾಂಕಗಳಲ್ಲಿ ತುಂಬಾ ಹಿಂದುಳಿದಿವೆ. ಏಕೆ ?

IV. **ಕೆಳಗಿನ ಪ್ರಶ್ನೆಗಳಿಗೆ *ಎರಡರಿಂದ ನಾಲ್ಕು* ವಾಕ್ಯಗಳಲ್ಲಿ ಉತ್ತರಿಸಿ :** 24 × 2 = 48

27. ಭಾರತದಲ್ಲಿನ ಭೂಸುಧಾರಣೆಗಳ ವಿಫಲತೆಗೆ ಕಾರಣಗಳನ್ನು ತಿಳಿಸಿ.

28. ಲೇವಾದೇವಿಗಾರರ ಅನಾನುಕೂಲತೆಗಳು ಯಾವುವು ?

29. 1991 ರ ಹೊಸ ಕೈಗಾರಿಕಾ ನೀತಿಯ ಗುಣಲಕ್ಷಣಗಳನ್ನು ಬರೆಯಿರಿ.

30. ಕೈಗಾರಿಕಾ ಕಾರ್ಮಿಕ ಕ್ಷೇತ್ರದ ಪ್ರಮುಖ ಸಮಸ್ಯೆಗಳು ಯಾವುವು ?

31. ಭಾರತದಲ್ಲಿನ ಬಡತನಕ್ಕೆ ಕಾರಣಗಳನ್ನು ತಿಳಿಸಿ.

32. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ ಉದ್ದೇಶಗಳು ಯಾವುವು ?

33. ಹಣಕಾಸು ಮೇಲ್ವಿಚಾರಣೆ ಮಂಡಳಿಯ ಕಾರ್ಯಗಳನ್ನು ಬರೆಯಿರಿ.

34. ಭಾರತವು ಸೇವೆಗಳ ರಫ್ತಿನ ಬೆಳವಣಿಗೆಯಲ್ಲಿ ಮುಂಚೂಣಿಯಲ್ಲಿದೆ. ಏಕೆ ?

35. ಮಾನವ ಅಭಿವೃದ್ಧಿ ಸೂಚ್ಯಾಂಕಗಳನ್ನು ಹೇಗೆ ಅಳೆಯಲಾಗುತ್ತದೆ ?

36. ಕೃಷಿ ಹಣಕಾಸಿನಲ್ಲಿ ವಾಣಿಜ್ಯ ಬ್ಯಾಂಕುಗಳ ಪಾತ್ರವೇನು ?

37. ಕೈಗಾರಿಕಾ ಎಸ್ಟೇಟ್‌ಗಳನ್ನು ಏಕೆ ಸ್ಥಾಪಿಸಲಾಗಿದೆ ?

38. ಕೃಷಿ ಕಾರ್ಮಿಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯು ಉತ್ತಮವಾಗಿಲ್ಲ. ಏಕೆ ?

39. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪ್ರಮುಖ ಕಾರ್ಯಕ್ರಮಗಳು ಯಾವುವು ?

40. ಭಾರತದಲ್ಲಿ ಮರಣದರವು ಇಳಿಕೆಯಾಗಲು ಕಾರಣವೇನು ?

41. ಭೂ ಸಂರಕ್ಷಣಾ ಕ್ರಮಗಳನ್ನು ತಿಳಿಸಿ.

42. ಅರಣ್ಯಗಳ ನಾಲ್ಕು ಉಪಯೋಗಗಳನ್ನು ಬರೆಯಿರಿ.

43. ಭಾರತದ ಜನಸಂಖ್ಯಾ ನೀತಿಯ ಮೂಲಭೂತ ಅಂಶಗಳು ಯಾವುವು ?

44. ಹಸಿರು ಕ್ರಾಂತಿಯು ಪರಿಸರ ಮಾಲಿನ್ಯಕ್ಕೆ ಕಾರಣವಾಗಿದೆ. ಹೇಗೆ ?

45. ಮಹಲ್ವಾರಿ ಪದ್ಧತಿಯನ್ನು ಸಂಕ್ಷಿಪ್ತವಾಗಿ ವಿವರಿಸಿ.

46. ತಕ್ಕಾವಿ ಸಾಲಗಳ ಅನುಕೂಲಗಳು ಯಾವುವು ?

47. ಸಣ್ಣ ಕೈಗಾರಿಕೆಗಳ ಸಮಸ್ಯೆಗಳನ್ನು ಬರೆಯಿರಿ.

48. ಕೈಗಾರಿಕಾ ಕಾರ್ಮಿಕರು ತಮ್ಮ ಅಸಹನೆಯನ್ನು ಮುಂದಿಡಲು ಬಳಸುವ ವಿಧಾನಗಳನ್ನು ಹೆಸರಿಸಿ.

49. ಭಾರತದಲ್ಲಿ ಸ್ಥಾಪಿಸಲಾದ ಹಡಗು ನಿರ್ಮಾಣ ಘಟಕಗಳನ್ನು ತಿಳಿಸಿ.

50. ಭಾರತದಲ್ಲಿ ರೈಲು ಸಾರಿಗೆಯ ಮಹತ್ವವೇನು ?

V. **ಕೆಳಗಿನ ಪ್ರಶ್ನೆಗಳಿಗೆ *ಮೂರರಿಂದ* ಆರು ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

51. ಆರ್ಥಿಕ ಅಭಿವೃದ್ಧಿಯಲ್ಲಿ ಸಂಪರ್ಕದ ಪಾತ್ರವೇನು ?

52. ಭಾರತದಲ್ಲಿ ಜನಸಾಂದ್ರತೆಯನ್ನು ಪ್ರಭಾವಿಸುವ ಅಂಶಗಳನ್ನು ತಿಳಿಸಿ.

53. ತುಂತುರು ನೀರಾವರಿಯ ಪ್ರಯೋಜನಗಳು ಯಾವುವು ?

54. ಭಾರತದಂತಹ ದೇಶಕ್ಕೆ ವಿದೇಶಿ ವ್ಯಾಪಾರವು ಏಕೆ ಅತ್ಯವಶ್ಯಕ ?

55. ಅಭಿವೃದ್ಧಿ ಹೊಂದಿದ ದೇಶಗಳ ಲಕ್ಷಣಗಳನ್ನು ಬರೆಯಿರಿ.

56. ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಏಕೆ ಸ್ಥಾಪಿಸಲಾಗಿದೆ ?

VI. **ಕೆಳಗಿನ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ :** $1 \times 4 = 4$

57. ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಮುಖ ಕಾರ್ಯಗಳು ಯಾವುವು ?